

ಚಿಕಿತ್ಸೆ ಎಂದು ಅನೇಕರು ಹೇಳುತ್ತಾರೆ. ಹಕ್ಕಿಗಳ ದನಿ ಮನಸ್ಸನ್ನು ಪ್ರವೇಶಿಸಿ ಉಂಟು ಮಾಡುವ ಅನೂಹ್ಯ ಬದಲಾವಣೆಯಲ್ಲಿ ಏನೋ ಶಕ್ತಿಯಿದೆ. ದೊಡ್ಡ ಕಾಯಿಲೆಗಳನ್ನು ತಹಬದಿಗೆ ತಂದುಕೊಂಡ ನಿದರ್ಶನಗಳಿವೆ. ಕ್ಯಾನ್ಸರ್ ರೋಗ ತಂದಿತ್ತ ಸಾವಿನ ದಿನವನ್ನೇ ಇಪ್ಪತ್ತು ವರ್ಷ ಮಂದಕ್ಕೆ ತಳ್ಳಿ ಕೂತ ಗೆಳೆಯರೊಬ್ಬರಿದ್ದಾರೆ. ಪ್ರಕೃತಿಯ ನಿರಂತರ ಒಡನಾಟ ನಮ್ಮಲ್ಲಿ ಕುತೂಹಲ ಹೆಚ್ಚಿಸಿ, ಹುಮ್ಮಸ್ಸಿನ ಟಾನಿಕ್ಕು ಉಣಿಸುತ್ತದೆ. ಹೀಗೆ ಮನೋಚಿಕಿತ್ಸೆ ಪಡೆಯಲು ಬರುವ ಅನೇಕರನ್ನು ನಾನು ನೋಡಿದ್ದೇನೆ.

ಒಮ್ಮೆ ವಯಸ್ಸಾದ ಜೋಡಿಗಳನ್ನು ಕಾಡಲ್ಲಿ ಕಂಡೆ. ಅವರು ಮುಂಬೈಯಿಂದ ಬಂದಿದ್ದರು. ಕುತೂಹಲದಿಂದ ನಾನವರನ್ನು ಎರಡು ದಿನ ಗಮನಿಸಿದೆ. ಇಬ್ಬರ ನಡುವೆ ಅಪರೂಪದ ಹೊಂದಾಣಿಕೆ ಮತ್ತು ಅನ್ಯೋನ್ಯತೆ ಇತ್ತು. ಸಮಾಧಾನ ಚಿತ್ತದ ಪ್ರೌಢ ನಡವಳಿಕೆಗಳಿದ್ದವು. ವಯಸ್ಸಾದಾಗ ಎಲ್ಲರೂ ಹೀಗೇ ಇದ್ದರೆ ಚೆನ್ನ ಎನ್ನುವಂತೆ ಅವರು ನನಗೆ ಕಾಣುತ್ತಿದ್ದರು. ಅಪರಿಚಿತ ಮುಖಗಳಿಗೂ ಸ್ನೇಹದ ಕಿರು ಮುಗ್ನಗೆ ಸಲ್ಲಿಸುತ್ತಿದ್ದರು.

ಗಂಡ ತಮ್ಮ ಕಾಯಿಲೆಯ ಕಾರಣಕ್ಕೆ ಕೊಂಚ ನಿತ್ರಾಣವಾಗಿದ್ದ ವ್ಯಕ್ತಿ. ಹೆಂಡತಿ ಮಗುವಿನಂತೆ ಅವರನ್ನು ಸಂಭಾಳಿಸುತ್ತಿದ್ದರು. ಇಬ್ಬರೂ ಮೌನವಾಗಿ ಕೂತು ಹಕ್ಕಿಗಳನ್ನು ದುರ್ಬೀನಿನಲ್ಲಿ ಹುಡುಕಿ ನೋಡಿ ಸಂತೋಷ ಪಡುತ್ತಿದ್ದರು. ಪಕ್ಷಿ ಕೂಗನ್ನು ಕಣ್ಣು ಮುಚ್ಚಿ ಆಸ್ವಾದಿಸುತ್ತಿದ್ದರು. ನಾನವರ ಸ್ನೇಹ ಸಂಪಾದಿಸಿ ಮಾತಾಡಿಸಿದೆ. ಅವರು ಮುಂಬೈಯಲ್ಲಿ ಬಹಳ ದೊಡ್ಡ ವ್ಯಾಪಾರ ಹೊಂದಿದ್ದರು. ಗಂಡ ಹಣ ದುಡಿಯುವ ಏಕಮಾತ್ರ ಜಿದ್ದಿಗೆ ಬಿದ್ದು ಆರೋಗ್ಯ, ನೆಮ್ಮದಿ ಕಳೆದುಕೊಂಡರು. ಅವರಿಗೀಗ ಕ್ಯಾನ್ಸರ್. ಪಟ್ಟಣದ ಸದ್ದುಗದ್ದಲ, ಜಗಳ, ಮನಸ್ತಾಪ, ಟೆನ್ಷನ್ ಬಿಟ್ಟರೆ ಬೇರೆ ಬದುಕು ಕಂಡವರಲ್ಲ. ನಗುವೂ ಗೊತ್ತಿಲ್ಲದಂತೆ ಗಂಟು ಮುಖದಲ್ಲಿ ಕಾಲ ಹಾಕಿ ಗಂಟು ಸಂಪಾದಿಸಿದವರು.

ವೈದ್ಯರು ಔಷಧೋಪಚಾರ ಮಾಡಿ ಕೊನೆಗೆ 'ನೀವು ಬದುಕಿರುವುದು ಕೆಲವೇ ತಿಂಗಳು ಬಾಕಿ' ಎಂದರು. ಮತ್ತೆ ಅವರೇನೆ 'ಹಕ್ಕಿಗಳ ದನಿಯನ್ನು ಕೇಳುತ್ತಾ ಕಾಲ ಕಳೆಯಿರಿ. ಕಾಡಿನ ಹಸಿರು ಸವಿದರೆ ಮನಸ್ಸಿಗೆ ಹಿತ ಸಿಗುತ್ತದೆ. ಆರೋಗ್ಯವೂ ಕೊಂಚ ಸುಧಾರಿಸಲೂಬಹುದು ಪ್ರಯತ್ನಿಸಿ ನೋಡಿ' ಎಂದರು. 'ಡಾಕ್ಟ್ರರ್ ಮಾತಿನಂತೆ ಹಕ್ಕಿಗಳ ಬದುಕನ್ನು ಹತ್ತಿರದಿಂದ ನೋಡುತ್ತಿದ್ದೇವೆ. ಭಾರತದ ಅನೇಕ ಪಕ್ಷಿಧಾಮಗಳಲ್ಲಿ ಕಾಲ ಕಳೆದಿದ್ದೇವೆ. ನಮ್ಮಿಂದ ಪಕ್ಷಿಗಳಿಗೆ ಯಾವ ಪ್ರಯೋಜನವೂ ಇಲ್ಲ ಎಂಬುದು ನಮಗೆ ಗೊತ್ತು. ಆದರೆ, ಬದಲಿಯಾಗಿ ನಾವು ಅವುಗಳನ್ನು ನೋಡಿ ಜ್ಞಾನ, ಮನನೆಮ್ಮದಿ, ಚೈತನ್ಯ ಪಡೆಯುತ್ತಿದ್ದೇವೆ. ಬೆಲೆ ಕಟ್ಟಲಾಗದ ಆಸ್ತಿ ದೇವರು ನಮ್ಮೆದುರಿಗೇ ತೆರೆದಿಟ್ಟಿದ್ದರೂ ನಾವು ಗಮನಿಸದೆ ತಪ್ಪು ಮಾಡಿದ್ದೆವು' ಎಂದು ಕಾಡಿಗೆ ಕೈ ಮುಗಿದರು.

ಬದುಕಿನ ಲಯ ಹದಗೆಡಿಸಿಕೊಂಡ ಮನುಷ್ಯ ಕೊನೆಯಲ್ಲಿ ತಾನೇ ಉಪೇಕ್ಷಿಸಿದ ಪಕ್ಷಿಗಳ ಬಳಿ ಬಂದು ಮನಶ್ಯಾಂತಿ, ನೆಮ್ಮದಿ ಮತ್ತು ಆರೋಗ್ಯ ಕೇಳಿ ಪಡೆಯುವ ಈ ಭಿಕ್ಷೆಯೇ ಒಂದು ಸೋಜಿಗ! ●